
ಅದರಿಂದ ಮೊದಲಿಗೆ ಪ್ರತಿ ಮೊಲೆಗಳನ್ನು ಡೆಟಾಲ್ ಅಥವಾ ಸಾವಲಾನ ದ್ರಾವಣದಲ್ಲಿ ಅದ್ದಿ 30 ಸೇಕೆಂಡವರೆಗೆ ಬಿಡಬೇಕು. ಈ ಒಂದು ಸಣ್ಣ ಕ್ರಮದಿಂದ ಹಲವಾರು ಸೂಕ್ಷ್ಮಾಣುಗಳನ್ನು ತಡೆಗಟ್ಟಿ ಕೆಚ್ಚಲು ಬಾವು ನಿಯಂತ್ರಿಸಬಹುದು.

2. ಮೊಲೆಗಳನ್ನು ಒರೆಸುವುದು: 30 ಸೆಕೆಂಡಗಳಾದನಂತರ ನಾಲ್ಕು ಮೊಲೆಗಳನ್ನು ಸ್ವಚ್ಚ ಬಟ್ಟೆಯಿಂದ ಒರಿಸಿ ಒಣಗಲು ಬಿಡಬೆಕು.


3. ಹಾಲಿನಲ್ಲಿ ಅಸಹಜತೆಯನ್ನು ಪರೀಕ್ಷಿಸುವುದು: ಮೊಲೆಗಳು ಒಣಗಿದ ನಂತರ ಪ್ರತಿಯೊಂದು ಮೊಲೆಗಳಿಂದ ಸ್ವಲ್ಪಮಟ್ಟದಲ್ಲಿ ಹಾಲನ್ನು ಕರೆಯಬೇಕು ಮತ್ತು ಅದರಲ್ಲಿ ಅಸಹಜತೆಯನ್ನು ಪರೀಕ್ಷಿಸಬೆಕು. ಯಾವುದಾದರು ಮೊಲೆಯಿಂದ ಕರೆದಿದ್ದ ಹಾಲಲ್ಲಿ ಅಸಹಜತೆ ಕಂಡುಬಂದರೆ ತುರ್ತಾಗಿ ಪಶುವೈದ್ಯರನ್ನು ಕರೆಸಿ ಸೂಕ್ತ ಚಿಕಿತ್ಸೆಯನ್ನು ನಿಡಬೇಕು.

4. ಹಾಲು ಕರೆಯುವಿಕೆ : ಪ್ರತಿಯೊಂದು ಮೊಲೆಗಳಿಂದ ಕರೆದಿದ್ದ ಹಾಲಿನಲ್ಲಿ ಸಹಜತೆ ಕಂಡುಬಂದರೆ, ಹಾಲು ಕರೆಯುವ ಯಂತ್ರದಿಂದ ಹಾಲು ಕರೆಯಬೇಕು.


5. ಸೋಂಕು ನಿವಾರಕ ಅನ್ವಯಿಸುವುದು: ಹಾಲು ಕರೆಯುವೆಕೆಯ ನಂತರ, ಪ್ರತಿ ಮೊಲೆಗೆ ಸಮವಾಗಿ ಸೋಂಕು ನಿವಾರಕ ಉದಾಹರಣೆಗೆ ಡೆಟಾಲ್ ಅಥವಾ ಸಾವಲಾನ ದ್ರಾವಣವನ್ನು ಅನ್ವಯಿಸಬೇಕು. ಇದೇ ರಿತಿಯಾಗಿ, ಹಾಲು ಕರೆಯುವ ಪೂರ್ವದಲ್ಲಿ ಹಾಗೂ ಹಾಲು ಕರೆಯುವಿಕೆಯ ನಂತರ ಈ ಪಂಚ ಸೂತ್ರಗಳನ್ನು ಅಳವಡಿಸಿಕೊಂಡರೆ ಖಂಡಿತವಾಗಿಯು ಸುಪ್ತ ಕೆಚ್ಚಲುಬಾವು ತಡೆಗಟ್ಟಲು ಸಾಧ್ಯ.




ಮೊದಲಿಗೆ ಪ್ರತಿ ಮೊಲೆಗೆ ಡೆಟಾಲ್ ಅಥವಾ ಸಾವಲಾನ ದ್ರಾವಣದಲ್ಲಿ ಅದ್ದಿ 30 ಸೇಕೆಂಡ ವರೆಗೆ ಬಿಡಬೇಕು



ಪ್ರತಿ ಮೊಲೆಗಳನ್ನು ಸ್ವಚ್ಚಗಳಿಸುವುದು ಮತ್ತು ಒಣಗಲು ಬಿಡುವುದು.



ಹಾಲಿನಲ್ಲಿ ಅಸಹಜತೆಯನ್ನು ಪರೀಕ್ಷಿಸುವುದು



ಹಾಲು ಕರೆಯುವಿಕೆ



ಹಾಲು ಕರೆಯುವೆಕೆಯ ನಂತರ, ಪ್ರತಿ ಮೊಲೆಗೆ ಸಮವಾಗಿ ಸೋಂಕು ನಿವಾರಕ ಅನ್ವಯಿಸುವುದು


ಲೇಖಕರು

ಡಾ. ಸಂತೋಷ ಶಿಂದೇ, ಪಶು ವಿಜ್ಞಾನಿ, ಕೃ.ವಿ.ಕೇಂ. ಶಿರಸಿ
ಡಾ. ರೂಪಾ ಎಸ್. ಪಾಟೀಲ್, ಕೀಟ ತಜ್ಞರು, ಕೃ.ವಿ.ಕೇಂ. ಶಿರಸಿ
ಡಾ. ಸಂತೋಷ ಎಚ್. ಎಂ. ತೋಟಗಾರಿಕೆ ತಜ್ಞರು ಕೃ.ವಿ.ಕೇಂ. ಶಿರಸಿ
ಡಾ. ಸಂತೋಷ ಹಂಜಗಿ, ಜಿಲ್ಲಾ ಮುಖ್ಯಸ್ಥರು, ಧಾರವಾಡ ಹಾಲು ಒಕ್ಕೂಟ



ಸಂಪಾದಕರು ಮತ್ತು ಪ್ರಕಾಶಕರು

ಡಾ. ಮಂಜು ಎಂ. ಜೆ.
ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು
ಕೃಷಿ ವಿಜ್ಞಾನಿ ಕೇಂದ್ರ, ಶಿರಸಿ

ಅಕ್ಷರ ಜೋಡಣೆ ಮತ್ತು ವಿನ್ಯಾಸ

ಶ್ರೀಮತಿ ಅನ್ನಪೂರ್ಣ ನೀರಲಗಿ
ಕಾರ್ಯಕ್ರಮ ಸಹಾಯಕರು (ಗಣಕಯಂತ್ರ)

Kannika Flex-9241489615



ಕೃಷಿ ವಿಶ್ವವಿದ್ಯಾಲಯ ಧಾರವಾಡ




# ಹಸುಗಳಲ್ಲಿ ಸುಪ್ತ ಕೆಚ್ಚಲು ಬಾವು:

"ಕಂಡು ಹಿಡಿಯಲು ಬಲು ಕಷ್ಟ, ಪಶುಪಾಲಕನಿಗೆ ಬಲು ನಷ್ಟ !!



ಆರೋಗ್ಯವಂತ ಕೆಚ್ಚಲು


ಡಿಸೆಂಬರ್ 2017

ಐ.ಸಿ.ಎ.ಆರ್–ಕೃಷಿ ವಿಜ್ಞಾನ ಕೇಂದ್ರ
ಉತ್ತರ ಕನ್ನಡ, ಶಿರಸಿ



ದೂರವಾಣಿ : 08384–228411
ಮಿಂಚಂಚೆ : kvkuks@gmail.com
ಜಾಲತಾಣ : www. kvkuttarkannada.org

# ಹಸುಗಳಲ್ಲಿ ಸುಪ್ತ ಕೆಚ್ಚಲು ಬಾವು

ಹೈನು ರಾಸುಗಳನ್ನು ಕಾಡುವ ಕೆಚ್ಚಲು ಬಾವು ಉಂಟು ಮಾಡುವ ಅನಾಹುತಗಳು ಹಲವು ಬಗೆ. ಈ ರೋಗವು ನಾನಾ ಜಾತಿಯ ಸೂಕ್ಷ್ಮಾಣುಗಳಿಂದ ಆಕಳು ಮತ್ತು ಎಮ್ಮೆಗಳಲ್ಲಿ ಬರುತ್ತದೆ. ಇದರಿಂದ ಹಾಲಿನ ಪ್ರಮಾಣವು ಕಡಿಮೆ ಆಗುವುದಲ್ಲದೆ ಕೆಲವೊಮ್ಮೆ ಹಸುಗಳು ಸಾವನ್ನು ಅನುಭವಿಸುತ್ತವೆ. ದೇಶದಲ್ಲಿ ಕೆಚ್ಚಲು ಬಾವು ಕಾಯಿಲೆಯಿಂದ ಆಗುತ್ತಿರುವ ನಷ್ಟ ವರ್ಷಕ್ಕೆ 7500 ಕೋಟಿ ರೂ ಗಳು. ಸಾಮಾನ್ಯವಾಗಿ ಕಣ್ಣಿಗೆ ಗೋಚರಿಸುವ ತೀವ್ರ ಸ್ವರೂಪದ ಕೆಚ್ಚಲು ಬಾವು ಸುಲಭವಾಗಿ ಪಶುಪಾಲಕನ ಗಮನಕ್ಕೆ ಬರುತ್ತದೆ. ಆದರೆ ವಾಸ್ತವವಾಗಿ ತೀವ್ರ ಕೆಚ್ಚಲು ಬಾವಿಗಿಂತ ಮೂರು ಪಟ್ಟು ಹೆಚ್ಚು ಆರ್ಥಿಕ ಹಾನಿ ಮಾಡುವುದು ಸುಪ್ತ ಕೆಚ್ಚಲು ಬಾವು.

## ಕೆಚ್ಚಲುಬಾವು ರೋಗದ ಪ್ರಾಮುಖ್ಯತೆ/ಮಹತ್ವ:

ನಮಗೆಲ್ಲರಿಗೂ ತಿಳಿದಿರುವಂತೆ ಹಾಲು ಪ್ರಕೃತಿದತ್ತವಾದ ಪರಿಪೂರ್ಣ ಆಹಾರ. ಮನುಷ್ಯನಿಗೆ ಬೇಕಾಗುವ ಬಹಳಷ್ಟು ಪೋಷಕಾಂಶಗಳು ಹಾಲಿನಿಂದ ಸಿಗುತ್ತವೆ. ಈ ಹಿನ್ನೆಲೆಯಲ್ಲಿ ಶುದ್ಧವಾದ ಹಾಲನ್ನು ಉತ್ಪಾದಿಸುವ ಮತ್ತು ಅದರ ಗುಣಮಟ್ಟ ಕಾಪಾಡಿಕೊಳ್ಳುವ ಅಗತ್ಯವಿದೆ. ಕೆಚ್ಚಲು ಬಾವುದಿಂದ ನರಳುವ ರಾಸುಗಳಲ್ಲಿ ಹಾಲಿನ ಇಳುವರಿ ಹಾಗೂ ಗುಣಮಟ್ಟ ಕಡಿಮೆಯಾಗಿರುತ್ತದೆ.

## ಕೆಚ್ಚಲು ಬಾವಿನ ವಿಧಗಳು ಹಾಗೂ ರೋಗ ಲಕ್ಷಣಗಳು:

1. ತೀವ್ರವಾದ ರೋಗಲಕ್ಷಣಗಳಿಂದ ಕೂಡಿದ ಕೆಚ್ಚಲುಬಾವು (ತೀವ್ರ ಕೆಚ್ಚಲುಬಾವು)

ರೈತರು ಸುಲಭವಾಗಿ ಗುರುತಿಸಬಹುದಾದ ಕೆಚ್ಚಲುಬಾವು. ತೀವ್ರವಾದ ರೋಗಲಕ್ಷಣಗಳಿಂದ ಕೂಡಿದ್ದು ಹಾಲಿನ ಗುಣಮಟ್ಟ ಹಾಗೂ ಇಳುವರಿಯಲ್ಲಿ ಭಾರೀ ವ್ಯತ್ಯಾಸ ಕಂಡುಬರುತ್ತದೆ. ಮೊದಲನೆಯದಾಗಿ ರೋಗಕ್ಕೆ ತುತ್ತಾದ ಕೆಚ್ಚಲಿನ ಭಾಗ ಊದಿಕೊಂಡಿರುತ್ತದೆ ಹಾಗೂ ಕೆಚ್ಚಲು ಮುಟ್ಟಲು ಬಿಸಿಯಾಗಿರುವಂತೆ ತೋರುತ್ತದೆ ಮತ್ತು ತೀವ್ರವಾದ ನೋವಿನಿಂದ ಕೂಡಿರುತ್ತದೆ. ಹಾಲು ಸಾಮಾನ್ಯವಾದ ಹಾಲಿನಂತಿರದೇ ಒಡಕಲಾಗಿ, ಮೊಸರಿನಂತಾಗಿ, ನೀರಿನಂತಾಗಿ, ರಕ್ತಮಿಶ್ರಿತವಾಗಿ ತೋರುತ್ತದೆ. ಆದರಿಂದ ತುರ್ತಾಗಿ ಪಶುವೈದ್ಯರನ್ನು ಕರೆಸಿ ಸೂಕ್ತ ಚಿಕಿತ್ಸೆ ಹಾಗೂ ಔಷದೋಪಚಾರ ಮಾಡುವ ಮೂಲಕ ರೋಗವನ್ನು ಹತೋಟಿಗೆ ತರಬಹುದು.

2. ಯಾವುದೇ ರೋಗಲಕ್ಷಣಗಳನ್ನು ಹೊರ ತೋರದ ಕೆಚ್ಚಲುಬಾವು (ಸುಪ್ತ ಕೆಚ್ಚಲುಬಾವು)

ಇದು ಹೈನೋದ್ಯಮದಲ್ಲಿ ತೊಡಗಿಸಿಕೊಂಡ ಎಲ್ಲರ ಪಾಲಿಗೆ ಬಹು ದೊಡ್ಡ ಶತ್ರು ಎಂದರೆ ತಪ್ಪಾಗಲಾರದು. ಇದನ್ನು ಕಂಡುಹಿಡಿಯುವುದು ಸುಲಭಸಾಧ್ಯವಲ್ಲ. ಹೈನುಗಾರಿಕೆಯಲ್ಲಿ ಕಂಡುಬರುವ ನಷ್ಟಗಳಲ್ಲಿನ ಬಹುಪಾಲು ಈ ರೀತಿಯ ಸುಪ್ತ ಕೆಚ್ಚಲುಬಾವಿನಿಂದಲೇ ಉಂಟಾಗುತ್ತದೆಂದು ಅಂದಾಜಿಸಲಾಗಿದೆ. ಎಲ್ಲಾ ಹಸುಗಳಲ್ಲಿ ಮೋದಲಿಗೆ ಸುಪ್ತ ಕೆಚ್ಚಲುಬಾವು ಕಂಡು ಬರುತ್ತದೆ ತದನಂತರ ತುರ್ತ ಚಿಕಿತ್ಸೆ ನೀಡದಿದ್ದರೆ ತೀವ್ರ ಕೆಚ್ಚಲುಬಾವುಗೆ ಪರಿವರ್ತಿಸುತ್ತದೆ. ಆದಕಾರಣ ಸುಪ್ತ ಕೆಚ್ಚಲುಬಾವಲ್ಲಿ ಕಂಡುಬರುವ ಸಾಮಾನ್ಯ ಲಕ್ಷಣಗಳು ಹಾಗೂ ಅದನ್ನು ಕಂಡುಹಿಡಿಯುವುದು ಬಹಳ ಮುಖ್ಯ.

## ಸಾಮಾನ್ಯ ಲಕ್ಷಣಗಳು:

- ಮೇಲ್ನೋಟಕ್ಕೆ ಚೆನ್ನಾಗಿಯೇ ಕಾಣಿಸುವ ಹಾಲು ಕಾಯಿಸಿದಾಗ ಒಡೆಯಬಹುದು, ಉಪ್ಪುಪ್ಪಾಗಿರಬಹುದು.
- ಹಾಲಿನ ಇಳುವರಿ ದಿನೇ ದಿನೇ ಅಲ್ಪ ಪ್ರಮಾಣದಲ್ಲಿ ಇಳಿಯುತ್ತಾ ಹೋಗುವುದು.
- ಹಾಲಿನ ಗುಣಮಟ್ಟದಲ್ಲಿ ನೇರವಾಗಿ ಕಾಣಿಸದ ಬದಲಾವಣೆಗಳು
- ರೈತನ ಗಮನಕ್ಕೆ ಬಾರದೆಯೂ ಸಾಕಷ್ಟು ಆರ್ಥಿಕ ಹಾನಿ

ಸುಪ್ತ ಕೆಚ್ಚಲುಬಾವು ಕಂಡುಹಿಡಿಯುವುದು

ಕೆಲವೊಂದು ಸರಳ ಪರೀಕ್ಷೆಗಳಿಂದ ರಾಸುಗಳಲ್ಲಿ ಸುಪ್ತ ರೀತಿಯ ಕೆಚ್ಚಲುಬಾವು ಇದೆಯೋ ಇಲ್ಲವೋ ಎಂಬುದನ್ನು ಕಂಡುಹಿಡಿಯಬಹುದು. ಸಾಮಾನ್ಯವಾಗಿ ಯಾವುದೇ ರೀತಿಯ ಕೆಚ್ಚಲುಬಾವಿನ ಸಂದರ್ಭದಲ್ಲಿ ಹಾಲಿನಲ್ಲಿನ ಜೀವಕೋಶಗಳ ಹಾಗೂ ಬ್ಯಾಕ್ಟೀರಿಯಾಗಳ ಸಂಖ್ಯೆಯಲ್ಲಿ ಏರುಪೇರಾಗುತ್ತದೆ. ಅಲ್ಲದೇ ಹಾಲಿನಲ್ಲಿನ ಅನೇಕ ಲವಣಗಳು ಹಾಗೂ ಕಿಣ್ವಗಳ ಪ್ರಮಾಣದಲ್ಲಿಯೂ ಏರುಪೇರಾಗುತ್ತದೆ. ಈ ಏರುಪೇರುಗಳನ್ನು ಗುರುತಿಸುವ ಮೂಲಕ ಸುಪ್ತ ಕೆಚ್ಚಲುಬಾವನ್ನು ಸುಲಭವಾಗಿ ಕಂಡುಹಿಡಿಯಬಹುದಾಗಿದೆ. ಸುಪ್ತ ಕೆಚ್ಚಲುಬಾವು ಕಂಡುಹಿಡಿಯಲು ಹಲವಾರು ಪರೀಕ್ಷೆಗಳು ಹಾಗೂ ವಿಧಾನಗಳನ್ನು ವಿಜ್ಞಾನಿಗಳು ಕಂಡುಹಿಡಿದಿದ್ದಾರೆ. ಕ್ಯಾಲಿಫೋರ್ನಿಯಾ ಕೆಚ್ಚಲು ಬಾವು ಪರೀಕ್ಷೆಯನ್ನು ಹಲವಾರು ದೇಶದಲ್ಲಿ ಸುಪ್ತ ಕೆಚ್ಚಲುಬಾವು ಕಂಡುಹಿಡಿಯಲು ಬಳಕೆ ಮಾಡುತ್ತಾರೆ. ಈ ಪರಿಕ್ಷೆ ಹಸುವಿನ ಸಮ್ಮುಖದಲ್ಲೇ ಸುಪ್ತ ಕೆಚ್ಚಲು ಬಾವನ್ನು ಸುಲಭ ಹಾಗೂ ಶೀಘ್ರವಾಗಿ ಪತ್ತೆ ಹಚ್ಚಬಹುದು.

## ಕ್ಯಾಲಿಫೋರ್ನಿಯಾ ಕೆಚ್ಚಲು ಬಾವು ಪರೀಕ್ಷೆ
## California Mastitis Test (CMT)

ಪರೀಕ್ಷೆಗೆ ಬೇಕಾಗುವ ಸಾಮಾಗ್ರಿಗಳು–ವೃತ್ತಾಕಾರದ ನಾಲ್ಕು ಭಾಗವುಳ್ಳ ಪ್ಲಾಸ್ಟಿಕ್ ಪೆಡಲ್ ಹಾಗೂ ಸಿ.ಎಂ.ಟಿ ದ್ರಾವಣ.

ವಿಧಾನ: ಪ್ಲಾಸ್ಟಿಕ್ ಪೆಡಲ್‌ನ ನಾಲ್ಕೂ ಭಾಗಗಳಿಗೆ ಬೇರೆ ಬೇರೆ ಮೊಲೆಗಳಿಂದ ನೇರವಾಗಿ 2 ಮಿ.ಲೀ. ಹಾಲನ್ನು ಕರೆಯಿರಿ, ತದನಂತರ ನಾಲ್ಕೂ ಭಾಗಗಳಿಗೆ ತಲಾ 2 ಮಿ.ಲೀ ಸಿ.ಎಂ.ಟಿ (CMT) ದ್ರಾವಣವನ್ನು ಬೆರೆಸಿ ಹಾಗೂ ಪೆಡಲ್ ಅನ್ನು ಒಂದೆರೆಡು ನಿಮಿಷಗಳ ಕಾಲ ವೃತ್ತಾಕಾರವಾಗಿ ತಿರುಗಿಸಿ.

### ಫಲಿತಾಂಶ:

1. ಹಾಲು ಹಾಗೂ ದ್ರಾವಕಗಳು ಒಂದನ್ನೊಂದು ಬೆರೆತು ದ್ರವರೂಪದಲ್ಲೇ ಉಳಿದರೆ ಹಾಲು ಉತ್ತಮ ಗುಣಮಟ್ಟದೆಂದೂ, ಕೆಚ್ಚಲುಬಾವಿನ ಲಕ್ಷಣಗಳು ಇಲ್ಲವೆಂದೂ ಅಭಿಪ್ರಾಯಪಡಬಹುದು.

2. ಹಾಲು ಹಾಗೂ ದ್ರಾವಕಗಳು ಬೆರೆತಾಗ ಸ್ವಲ್ಪಮಟ್ಟಿಗೆ ಮಂದವಾದ ದ್ರಾವಣ ಉತ್ಪತ್ತಿಯಾದಲ್ಲಿ ಸದರೀ ಹಾಲಿನಲ್ಲಿ ಸುಪ್ತ ಕೆಚ್ಚಲುಬಾವು ಇರಬಹುದೆಂದು ಅಭಿಪ್ರಾಯಪಡಬಹುದು.

3. ಹಾಲು ಹಾಗೂ ದ್ರಾವಕಗಳು ಬೆರೆತಾಗ ಗಣನೀಯ ಪ್ರಮಾಣದಲ್ಲಿ ಮಂದವಾದ ಜೆಲ್ ರೀತಿಯ ದ್ರಾವಣ ಉಂಟಾದಲ್ಲಿ – ನಿಶ್ಚಿತವಾಗಿಯೂ ಈ ಹಾಲು ಕೆಚ್ಚಲುಬಾವು ಪೀಡಿತ ಹಸುವಿನದೆಂದು ಅಭಿಪ್ರಾಯಪಡಬಹುದು.




ಕ್ಯಾಲಿಫೋರ್ನಿಯಾ ಕೆಚ್ಚಲು ಬಾವು ಪರೀಕ್ಷೆ ಕಿಟ್



ನಾಲ್ಕೂ ಮೊಲೆಗಳಿಂದ ತಲಾ ಎರಡು ಮಿಲಿ ಹಾಲನ್ನು ಕರೆಯಿರಿ




ಮಂದ ದ್ರಾವಣ ಅಥವಾ ದ್ರಾವಣದಲ್ಲಿ ಸಣ್ಣ ಸಣ್ಣ ಗಡ್ಡೆಗಳು ಕಾಣಿಸಿದಲ್ಲಿ ಸುಪ್ತ ಕೆಚ್ಚಲು ಬಾವು ಎಂದು ತಿಳಿಯಿರಿ

## ಕೆಚ್ಚಲುಬಾವು ನಿಯಂತ್ರಣಕ್ಕಾಗಿ ಹೈನುಗಾರಿಕೆಯಲ್ಲಿ ಸ್ವಚ್ಛತೆಯ ಮಹತ್ವ

ಕೆಚ್ಚಲು ಬಾವು ನಿಯಂತ್ರಿಸಿ ಅಧಿಕ ಲಾಭಗಳಿಸಿ. ರೋಗ ಬಂದಾಗ ಒದ್ದಾಡುವುದಕ್ಕಿಂತ ರೋಗ ಬಾರದಂತೆ ತಡೆಗಟ್ಟುವುದು ಲೇಸು. ಹೈನುಗಾರಿಕೆಯ ಪ್ರತೀ ಹಂತದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಿ. ಶುದ್ಧ ಹಾಲಿನ ಉತ್ಪಾದನೆಗಾಗಿ ಹಾಗೂ ಕೆಚ್ಚಲುಬಾವಿನಂತಹ ಮಾರಕ ರೋಗಗಳ ನಿಯಂತ್ರಣಕ್ಕಾಗಿ, ತನ್ಮೂಲಕ ಸಮುದಾಯದ ಆರೋಗ್ಯ ರಕ್ಷಣೆಗಾಗಿ ಹಾಲು ಉತ್ಪಾದನೆಯಿಂದ ಮೊದಲುಗೊಂಡು ಅಂತಿಮವಾಗಿ ಹಾಲು ಗ್ರಾಹಕನ ಕೈಸೇರುವವರೆಗೆ ಪ್ರತಿಯೊಂದು ಹಂತದಲ್ಲಿಯೂ ಸ್ವಚ್ಛತೆ ಹಾಗೂ ಶುಧ್ಧತೆಯನ್ನು ಅಳವಡಿಸುವುದು ಅಗತ್ಯಗಳಲ್ಲೊಂದಾಗಿದೆ. ವಿಶೇಷವಾಗಿ ರೈತರು ತಮ್ಮ ಜಾನುವಾರು ಕ್ಷೇತ್ರಗಳಲ್ಲಿ ಅಳವಡಿಸಿಕೊಳ್ಳಲೇಬೇಕಾದ ಕೆಲವು ಸ್ವಚ್ಛತಾ ನಿಯಮಗಳಾದ, ಹೈನು ರಾಸುಗಳ ಸ್ವಚ್ಛತೆ ಹಾಗೂ ಆರೋಗ್ಯ, ಹಾಲು ಕರೆಯುವವರ ಸ್ವಚ್ಛತೆ ಹಾಗೂ ಆರೋಗ್ಯ ಹಾಲು ಕರೆಯಲು ಬಳಸುವ ಪರಿಕರಗಳ ಸಂಪೂರ್ಣ ಸ್ವಚ್ಛತೆ, ಹಾಲು ಕರೆಯುವ ಸರಿಯಾದ ಪದ್ಧತಿಗಳು – ಪೂರ್ಣ ಮುಷ್ಠಿ ಪದ್ಧತಿ, ಪರಿಸರದ ಸ್ವಚ್ಛತೆ ಬಗ್ಗೆ ನಾವು ಗಮನಹರಿಸಬೇಕಾಗುತ್ತದೆ. ಈ ಎಲ್ಲಾ ಹಂತಗಳೋದಿಗೆ ಸುಪ್ತ ಕೆಚ್ಚಲುಬಾವು ತಡೆಗಟ್ಟಲು ಮೋಲೆ ಮತ್ತು ಕೆಚ್ಚಲು ಸ್ವಚ್ಚಗಳಿಸುವುದು ಬಹಳ ಮೂಖ್ಯ.

## ಹಸುಗಳಲ್ಲಿ ಸುಪ್ತ ಕೆಚ್ಚಲುಬಾವು ತಡೆಗಟ್ಟಲು ಹಾಲು ಕರೆಯುವ ಪೂರ್ವ ಹಾಗೂ ಹಾಲು ಕರೆದ ನಂತರ ನಿಭಾಯಿಸಬೇಕಾದ ಪಂಚ ಸೂತ್ರಗಳು

1. ಮೊಲೆ ಮತ್ತು ಕೆಚ್ಚಲು ಸ್ವಚ್ಛಗಳಿಸುವುದು: ಹಸುಗಳು ನೆಲದ ಮೆಲೆ ಕುಳಿತಿರುವಾಗ ಮಣ್ಣಿನಲ್ಲಿ ಇರತಕ್ಕಂತಹ ಸೂಕ್ಷ್ಮಾಣುಗಳು ಮೊಲೆ ಮತ್ತು ಕೆಚ್ಚುಲಿಗೆ ಅಂಟಿಕೊಳ್ಳುತ್ತವೆ. ಮೊಲೆ ಮತ್ತು ಮೊಲೆ ತೊಟ್ಟಿನ ಮೆಲೆ ಗಾಯಗಳಾದಾಗ ವಿಷ ಕ್ರಿಮಿಗಳು ಮೊಲೆಗೆ ಹೋಗಿ ಕೆಚ್ಚಲು ಬಾವನ್ನುಂಟು ಮಾಡುತ್ತದೆ.